# ಟಂಕಸಾಲೆಗಳಲ್ಲಿ ನಾಣ್ಯ ಅಚ್ಚುಹಾಕುವ ಸಂಭ್ರಮ




ಚಂದ್ರನ ಮೇಲೆ ಮಾನವ ಹೆಜ್ಜೆಯೂರಿ 50 ವರ್ಷಗಳಾದ ಐತಿಹಾಸಿಕ ಸಂಭ್ರಮದ ಈ ಗಳಿಗೆಯಲ್ಲಿ ಹಲವು ದೇಶಗಳು ಚಂದ್ರಯಾನ ಕುರಿತಂತೆ ಬಗೆಬಗೆಯ ನಾಣ್ಯಗಳನ್ನು ಅಚ್ಚುಹಾಕಿವೆ. ವಿಶೇಷವಾಗಿ ಅಮೆರಿಕ, ಆಸ್ಟ್ರೇಲಿಯ, ಇಂಗ್ಲೆಂಡ್ ತಮ್ಮ ಟಂಕಸಾಲೆಗಳಲ್ಲಿ ನಾಣ್ಯ ಒತ್ತಲು ವಿಶೇಷ ಅವಕಾಶ ಕಲ್ಪಿಸಿವೆ. ಈಗ ಆನ್‌ಲೈನ್‌ನಲ್ಲಿ ಕೂಡ ಅವನ್ನು ಖರೀದಿಸಬಹುದು. ಈ ನಾಣ್ಯಗಳು ಚಿನ್ನ, ಬೆಳ್ಳಿ, ಪ್ಲಾಟಿನಂ ಮತ್ತು ಮಿಶ್ರಲೋಹಗಳಲ್ಲಿ ಹೊರಬಂದಿವೆ. ಅಮೆರಿಕ ಈ ಸಂದರ್ಭಕ್ಕೆಂದೇ ಪ್ರತಿಭಾನ್ವಿತ ಕಲಾಕಾರರನ್ನು ಆಹ್ವಾನಿಸಿ, ಅಪೊಲೋ–11ರ ಯಾವ ಯಾವ ಅಂಶಗಳನ್ನು ಬಳಸಿಕೊಳ್ಳಬಹುದು ಎಂದು ಚರ್ಚಿಸಲು ಸಭೆಯನ್ನೇ ಕರೆದಿತ್ತು. ಅದರ ಫಲವಾಗಿಯೇ ಈಗ ವಿವಿಧ ಮೌಲ್ಯದ ನಾಣ್ಯಗಳನ್ನು ಟಂಕಸಾಲೆ ಬಿಡುಗಡೆಮಾಡಿವೆ. 5 ಡಾಲರ್ ನಮೂದಿಸಿರುವ ಚಿನ್ನದ ನಾಣ್ಯ, ಒಂದು ಡಾಲರ್‌ನ ಬೆಳ್ಳಿ ನಾಣ್ಯಗಳು ವಿಶೇಷವಾಗಿ ಗಮನಸೆಳೆದಿವೆ.




ನಾಣ್ಯದ ಒಂದು ಮುಖದಲ್ಲಿ ಚಂದ್ರನ ಮೇಲೆ ನಿಂತ ನೀಲ್ ಆರ್ಮ್‌ಸ್ಟ್ರಾಂಗ್ ಅಮೆರಿಕದ ಧ್ವಜವನ್ನು ಹಾರಿಸುತ್ತಿರುವುದು, ಇನ್ನೊಂದು ಬದಿಯಲ್ಲಿ ಅವನು ಚಂದ್ರನ ಮೇಲೆ ಬೂಟಿನ ಗುರುತು ಮಾಡಿಸಿರುವುದು ಎದ್ದುಕಾಣುತ್ತದೆ. ಆದರೆ ನೀವು ನಾಣ್ಯದ ಇಂದಿನ ಮೌಲ್ಯದ ಬಗ್ಗೆಯೂ ಯೋಚಿಸಬೇಕು. 5 ಡಾಲರ್ ಎಂದು ನಮೂದಿಸಿರುವ ಚಿನ್ನದ ನಾಣ್ಯದ ಬೆಲೆ 436 ಡಾಲರ್. ಇದರಲ್ಲಿ 8.359 ಗ್ರಾಂ ಚಿನ್ನವಿದೆ. ಚಿನ್ನದ ನಾಣ್ಯಕ್ಕೆ ತೆರಬೇಕಾದ ಹೆಚ್ಚುವರಿ ಶುಲ್ಕ 35 ಡಾಲರ್, ಬೆಳ್ಳಿಯದಕ್ಕೆ 10 ಡಾಲರ್. ಸಮ್ಮಿಶ್ರ ಲೋಹದ ನಾಣ್ಯಕ್ಕೆ 5 ಡಾಲರ್ ತೆರಬೇಕು. ಹೆಚ್ಚುವರಿಯಾಗಿ ವಿಧಿಸಿರುವ ಈ ಶುಲ್ಕ ಸ್ಮಿತ್‌ಸೋನಿಯನ್ ನ್ಯಾಷನಲ್ ಸ್ಪೇಸ್ ಮ್ಯೂಸಿಯಂನ ಅಭಿವೃದ್ಧಿಗೆ ಹೋಗುತ್ತದೆ. ಇನ್ನೊಂದು ಭಾಗ 'ಡೆಸ್ಟಿನೇಷನ್ ಮೂನ್' ಎಂಬ ವಸ್ತುಪ್ರದರ್ಶನದ ಖರ್ಚಿಗೂ, ಇನ್ನೊಂದು ಭಾಗ 'ಅಸ್ಟ್ರಾನಾಟ್ ಮೆಮೊರಿಯಲ್ ಫೌಂಡೇಶನ್'ಗೂ ಮತ್ತು ಗಗನಯಾನಿಗಳಾಗಿ ಹೊರಟವರಿಗೆ ಸ್ಕಾಲರ್‌ಶಿಪ್ ಕೊಡಲು ಬಳಕೆಯಾಗುತ್ತಿದೆ.




ಆಸ್ಟ್ರೇಲಿಯಾದ ಟಂಕಸಾಲೆಯಿಂದ ಹೊರಬಂದಿರುವ ನಾಣ್ಯದಲ್ಲಿ ಒಂದು ಮುಖದಲ್ಲಿ 100 ಡಾಲರ್ ನಾಣ್ಯ ಎಂದು ಅಚ್ಚಾಗಿದೆ. ಮಾರಾಟ ಬೆಲೆ 2795 ಆಸ್ಟ್ರೇಲಿಯನ್ ಡಾಲರ್. ಇದು 99.99 ಪರಿಶುದ್ಧ ಚಿನ್ನದಿಂದ ತಯಾರಿಸಿದ್ದು. ಈ ನಾಣ್ಯದಲ್ಲಿ ಇನ್ನೂ ಒಂದು ವಿಶೇಷವಿದೆ. ಒಂದು ಮುಖದಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ನಿಂತಿರುವ ಚಿತ್ರ. ಕೆಳಗೆ ಆಸ್ಟ್ರೇಲಿಯದಲ್ಲಿ ಈ ಐತಿಹಾಸಿದ ಕ್ಷಣವನ್ನು ಟಿ.ವಿ. ಯಲ್ಲಿ ತೋರಿಸಲು ಬಳಸಿದ ಆಂಟೆನಾ ಚಿತ್ರವಿದೆ. ಆರ್ಮ್‌ಸ್ಟ್ರಾಂಗ್ ಚಂದ್ರನಲ್ಲಿ ಇಳಿಯುತ್ತಿರುವ ದೃಶ್ಯದ ಒಂದು ಡಾಲರ್ ನಾಣ್ಯವನ್ನು ಟಂಕಿಸಿದ್ದರೂ ಇನ್ನೂ ಚಲಾವಣೆಗೆ ತಂದಿಲ್ಲ. ಆಸ್ಟ್ರೇಲಿಯದ ಪರ್ತ್ ಟಂಕಸಾಲೆ ಒಂದು ಔನ್ಸ್ ತೂಕದ 100 ಡಾಲರ್ ಎಂದು ಕೆತ್ತಿರುವ ಚಿನ್ನದ ನಾಣ್ಯವನ್ನು ಹೊರತಂದಿದೆ. ಇದರ ಮಾರಾಟ ಬೆಲೆ 1441 ಆಸ್ಟ್ರೇಲಿಯನ್ ಡಾಲರ್. ವಿಶೇಷವೆಂದರೆ ಒಂದೆಡೆ ನೀಲ್ ಆರ್ಮ್‌ಸ್ಟ್ರಾಂಗ್ ಚಿತ್ರ, ಇನ್ನೊಂದು ಮುಖದಲ್ಲಿ ರಾಣಿ 2ನೇ ಎಲಿಜಬೆತ್ ಚಿತ್ರ.

ಭೂಗೋಳದಲ್ಲಿ ಹೆಚ್ಚೇನೂ ಪ್ರಸಿದ್ಧಿ ಇಲ್ಲದ ಸಾಲೋಮನ್ ದ್ವೀಪ ಕೂಡ (ಸ್ವಾತಂತ್ರ್ಯ ರಾಜ್ಯ) ನಾವೂ ಈ ಸಂಭ್ರಮದಲ್ಲಿ ಭಾಗವಹಿಸುತ್ತೇವೆ ಎಂದು ಅರ್ಧ ಡಾಲರ್ ಎಂದು ನಮೂದಿಸಿರುವ ನಾಣ್ಯವನ್ನು ಟಂಕಿಸಿದೆ. ವಾಸ್ತವವಾಗಿ ಈ ಪುಟ್ಟ ದೇಶದಲ್ಲಿರುವ ಶೇ. 95 ಜನ ಬುಡಕಟ್ಟಿನವರು.

ಬ್ರಿಟನ್ ಇನ್ನೂ ಆಳುತ್ತಿರುವ ದಕ್ಷಿಣ ಅಟ್ಲಾಂಟಿಕ್ ಸಮಭಾಜಕ ವೃತ್ತದಲ್ಲಿರುವ ಅಸೆನ್ಷನ್ ದ್ವೀಪಕ್ಕೂ '50ರ ಸಂಭ್ರಮ' ಭಾರಿ ಉತ್ಸಾಹ ತಂದಿದೆ. ಇದು ಒಂದು ಕ್ರೌನ್ ಬೆಲೆಯ ಬೆಳ್ಳಿ ನಾಣ್ಯವನ್ನು ಹೊರತಂದಿದೆ. ಬೆಲೆ 41.63 ಪೌಂಡ್. ಇದನ್ನು ಟಂಕಿಸಿದ್ದು ಬ್ರಿಟನ್ನಿನ 'ಪಾಬ್ ಜಾಯ್' ಎಂಬ ಟಂಕಸಾಲೆ.

